ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ರೀತಿ ೧೯೭೯ರಲ್ಲಿ ಅಗ್ರಿಮೆಂಟ್ ಏನಾದರೂ ಇದ್ದರೆ ಆದರಲ್ಲಿ ಜನರಲ್ ಕಂಡೀಷನ್ ಇರುತ್ತದೆ. ನೀವು ಅಲ್ಲಿ ಜನರೇಟ್ ಮಾಡುತ್ತೀರಿ, ವೀಲಿಂಗ್ ಚಾರ್ಜ್ ಇಷ್ಟು ಕೊಡಬೇಕು, ಟ್ಯಾಕ್ಸ್ ಇಷ್ಟು ಕೊಡಬೇಕು, ಈ ರೀತಿ ಪವರ್ ಸಪ್ಲೈ ಮಾಡುತ್ತೇವೆ ಅವ್ಯೂಸಂದ್ರದಲ್ಲಿ ಎಂದು ಅಗ್ರಿಮೆಂಟ್ ಇದ್ದರೆ ಆದರ ಕಾಪಿಯನ್ನು ಒದಗಿಸಿಕೊಡುತ್ತೇನೆ ಅಥವಾ ಅದನ್ನು ಸಭೆಯ ಮುಂದೆ ಇಡುತ್ತೇನೆ. ಆದರಲ್ಲಿ ಹೈಡ್ ಅಂಡ್ ಸಿಕ್ ಏನೂ ಇಲ್ಲ. ಅದನ್ನು ಕ್ಲೋಸ್ ಮಾಡದೇ ಇರುವುದಕ್ಕೆ ಅವರು ಕೊಟ್ಟಿರತಕ್ಕಂಥ ಎರಡು ಕಾರಣ ಇದೆ. ಒಂದು ಪೊಲ್ಯೂಷನ್ ಎಂದು ಅವರು ಹೇಳಿದ್ದಾರೆ. ಪೊಲ್ಯೂಷನ್ ಬಗ್ಗೆ ಸಾಮಾನ್ಯವಾಗಿ ಸುತ್ತಮುತ್ತ ಇರುವುದರಿಂದ ದೂರು ಬಂದಾಗ ಅದನ್ನು ಕಡಿಮೆ ಮಾಡುವುದಕ್ಕೆ ಅಥವಾ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕಾದ್ದು ಅವರ ಜವಾಬ್ದಾರಿ. ಅದರ ಬಗ್ಗೆ ಸಂಪೂರ್ಣವಾಗಿ ಪೊಲ್ಯೂಷನ್ ಬೋರ್ಡ್‌ನವರು ಏನು ನೋಟೀಸ್ ಕೊಟ್ಟಿದ್ದಾರೆ, ಏನು ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಂಡು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜೊತೆಗೆ ವೀಲಿಂಗ್ ಮಾಡಿಕೊಡುವುದಕ್ಕೆ ಯಾವರೀತಿ ಅಡ್ಡಿಆಡಚಣೆಗಳು ಇಲ್ಲ, ಅಥವಾ ಅವರು ಇಲ್ಲಿ ಜನರೇಟ್ ಮಾಡತಕ್ಕಂಥಾದ್ದೇ ಸಾಕು ಪವರ್ ಬೇಕಾಗಿಲ್ಲ ಎಂದರೆ ಅವರು ಜನರೇಟ್‌ಮಾಡಿ ನಮಗೆ ಕೊಟ್ಟರೆ ನಾವೇ ಕೊಂಡುಕೊಳ್ಳುವುದಕ್ಕೂ ಕೂಡ ತಯಾರಾಗಿದ್ದೇವೆ. ಅದಕ್ಕೋಸ್ಕರ ಕ್ಲೋಸ್ ಮಾಡತಕ್ಕ ಪ್ರಶ್ನೆ ಬರುವುದಿಲ್ಲ. ಇದು ಬಳಕೆ ಹಳೆಯದಾಗಿದೆ. ಏಕನಾಮಿಕ್ ಆಗಿ ಜನರೇಟರ್ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ರಿಪೇರಿ ಮಾಡಿ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ.—ಅಲ್ಲಿ ಎರಡು ಜನರೇಟರ್ಸ್ ಇದೆ.

ಅಧ್ಯಕ್ಷರು.—ಒಂದೇ ಸಾರಿ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಬೇಕೆಂದು ರೂಲ್ ಇದೆ.

ಶ್ರೀ ಕೆ. ಬಿ. ಶಾನಪ್ಪ.—ನಿನ್ನೆ ಮೊನ್ನೆ ಚೆನ್ನಾಗಿದ್ದಿರಿ. ಇವತ್ತು ಏತಕ್ಕೆ ಭಯಂಕರವಾಗಿ ಬೆನ್ನು ಹತ್ತಿದ್ದೀರಿ. ಸ್ವಲ್ಪ ದಯಮಾಡಿ ಅವಕಾಶ ಮಾಡಿಕೊಡಿ

ಅಧ್ಯಕ್ಷರು.—ಈ ಕಾಲಿಂಗ್ ಅಟೆನ್‌ಷನ್ಸ್ ಇವೆ. ಸಮಯವನ್ನು ದುರುಪಯೋಗ ಮಾಡಿಕೊಳ್ಳಬೇಡಿ.

ಶ್ರೀ ಕೆ. ಬಿ. ಶಾನಪ್ಪ.—೧೫೦-೨೦೦ ಜನ ಸಾಯುತ್ತಿದ್ದಾರೆ. ಒಂದೇ ಜನರೇಟರ್ ನಡೆಸುತ್ತಿದ್ದಾರೆ. ೧೯೭೨ರಲ್ಲಿ ಥರ್ಮಲ್ ಪ್ಲಾಂಟ್‌ನವರಿಗೆ ೯ ಲಕ್ಷ ೨೫ ಸಾವಿರ ರೂಪಾಯಿ ಸರ್ಕಾರದವರು ಕೊಟ್ಟಿದ್ದಾರೆ. ಯಾವ ಲೆಕ್ಕದಲ್ಲಿ ಕೊಟ್ಟಿದ್ದೀರಿ. ಇದು ೩ ಕೋಟಿ ರೂಪಾಯಿ ಪ್ರಾಜೆಕ್ಟ್. ಪಕ್ಕದಲ್ಲಿ ಪಂ ಸಿ ಸಿ ಯವರು ಇದ್ದ ಅದನ್ನು ಕೊಳ್ಳುವುದಕ್ಕೆ ತಯಾರಿದ್ದಾರೆ, ಇಷ್ಟು ಕೆಲಸ ಮಾಡುವಂಥ ೧೫೦-೨೦೦ ಜನ ಕೆಲಸಗಾರರಿಗೆ ಪರ್ಮಿನೆಂಟ್ ಎಂಪ್ಲಾಯ್‌ಮೆಂಟ್ ಬಗ್ಗೆ ಗ್ಯಾರೆಂಟಿ ಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆ. ಇ. ಬಿ. ಯವರು ಅದನ್ನು ಕೊಂಡುಕೊಳ್ಳುವುದಕ್ಕೆ ತಯಾರಿದ್ದಾರೆ. ವಾಪಸಿಲ್ಲರಿಗಾಗಿ ಸಿವಿಲ್ ಕಾರ್ಯವನ್ನು ಮಾಡಿದ್ದಾರೆ. ೬,೦೦೦ ಜನ ನೌಕರರು ಕಳೆದ ಎರಡು ವರ್ಷಗಳಿಂದ ಕೆಲಸ ಇಲ್ಲದೇ ಇದ್ದಾರೆ. ಅಲ್ಲಿ ಕೂಡ ಪವರ್ ಡಿಸೆಕನಕ್ಟ್ ಮಾಡಬೇಕು. ಕಾಲೋನಿಯವರಿಗೆ ಸುಮಾರು ೬-೭ ಲಕ್ಷ ರೂಪಾಯಿ ಹಾಗೆ ನಿಂತಿದೆ. ಮಾನವೀಯತೆಯಿಂದ ಡಿಸ್‌ಕನೆಕ್ಟ್ ಮಾಡಿಲ್ಲ. ಕೇಂದ್ರಸರ್ಕಾರದ ಜೊತೆ, ಐ.ಡಿ.ಬಿ.ಐ. ನವರ ಜೊತೆಗೆ ಮಾತುಕತೆ ಮಾಡಿ, ೩೧ ಕೋಟಿ ಹಣ ಕೊಟ್ಟು ಕೆಳವರ್ಗದ ಬಾಯ್ಲರ್‌ಗಳನ್ನು ತಯಾರು ಮಾಡುವುದಕ್ಕೆ ಪರವಾಗಿ ಸಿಕ್ಕಿದೆ ಎಂದು ನನಗೆ ತಿಳಿದು ಬಂದಿದೆ. ಅದೇ ರೀತಿ ಬಿ.ಬಿ.ಎಲ್.ನವರು ಪ್ರಾರಂಭ ಮಾಡಿದರೂ ಬೇಕಾದಷ್ಟು ಪವರ್ ಬೇಕಾಗುತ್ತದೆ ಇದರ ಬಗ್ಗೆ ಪೂರ್ಣವಾಗಿ ಪರಿಶೀಲನೆ ಮಾಡಿ, ಯಾವರೀತಿ ಇದನ್ನು ಉಳಿಸಿಕೊಳ್ಳಬೇಕೆಂಬುದನ್ನು ಯೋಚನೆ ಮಾಡಲಾಗುವುದು.

ನಿಯಮ : ಸಿಪಿಲರ ಮೇರೆಗೆ

ಅಧ್ಯಕ್ಷರು.—ಕಲ್ಯಾಣರಾವ್ ಪೊಳೆಕೇರಿ, ಅಬ್ಸೆಂಟ್, ಶಿವಾನಂದ ಹೆಚ್. ಕೌಜಲಗಿ ಅಬ್ಸೆಂಟ್, ಶರಣಬಸಪ್ಪ ಮಾಲಿ ಪಾಟೀಲ್ ಅಬ್ಸೆಂಟ್ಸ್, ವಸಂತ ಬಂಗೇರಾ ಅಬ್ಸೆಂಟ್.

ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹದಾಯಕ ದರವನ್ನು ನಿಗಧಿ ಮಾಡುವುದು

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಹಾಲಿ ಬೆಲೆ ನೀಡುತ್ತಿರುವುದು ತೀರಾಕಡಿಮೆ ಆಂದರೆ ೩.೫ ಜಿಡ್ಡಿನಂಶಕ್ಕೆ ೨.೯೫ ಪೈಸೆ ಹಾಲು ಉತ್ಪಾದಕರು ಸೀಮೆ ಹಸುಗಳನ್ನು ಖರೀದಿಸಬೇಕಾದರೆ ದುಬಾರಿ ಬೆಲೆಗಳನ್ನು ನೀಡಬೇಕಾಗಿದೆ. ರಾಸುಗಳನ್ನು ಸಾಕ ಬೇಕಾದರೆ ಬೂಸ, ಹಿಂಡಿಗಳ ಬೆಲೆಗಳು ಗಗನಕ್ಕೇರಿವೆ ಮತ್ತು ಅವುಗಳನ್ನು ಸಂರಕ್ಷಿಸಲು ಔಷಧಿಗಳನ್ನು ಖರೀದಿಸಲು ಬಹಳ ದುಬಾರಿ ವೆಚ್ಚವಾಗುತ್ತಿದೆ. ಈ ರೀತಿಯಲ್ಲಿ ಉತ್ಪನ್ನ ಮಾಡುವ ಹಾಲಿಗೆ ಪ್ರೋತ್ಸಾಹದಾಯಕ ದರವನ್ನು ಕರ್ನಾಟಕ ಹಾಲಿನ ಮಹಾಮಂಡಳಿಯು ನಿಗದಿ ಮಾಡಿಲ್ಲ. ಆದುದರಿಂದ ಹಾಲು ಉತ್ಪಾದಕರು ತೀರಾ ಕಷ್ಟನಷ್ಟಗಳನ್ನು ವಿಧಿಯಿಲ್ಲದೆ ಅನುಭವಿಸುತ್ತಿದ್ದಾರೆ ಈ ರೀತಿಯಲ್ಲಿ ಇದು ಸಾರ್ವಜನಿಕ ಮಹತ್ವದ ಜರೂರು ವಿಷಯವಾದ್ದರಿಂದ ಇದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಬೈರೆಗೌಡ.— ಮಾನ್ಯ ವೆಂಕಟರಾಮಯ್ಯನವರು ಹಿಂದೆ ಹಾಲು ಬೆಲೆ ಜಾಸ್ತಿ ಮಾಡಿದಾಗ, ವಿರೋಧ ಮಾಡಿದರು. ಈಗ ಒಳ್ಳೆಯ ಬುದ್ಧಿ ಬಂದಿದೆ ಎಂದು ಕಾಣುತ್ತದೆ.

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು),— ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯು ಶೇಕಡ ೩.೫ ಜಿಡ್ಡಿಗೂ ಹಾಗೂ ೮.೫ ಜಿಡ್ಡೇತರ ಪದಾರ್ಥ ಹೊಂದಿದ ಪ್ರತಿ ಕೆ.ಜಿ. ಹಾಲಿಗೆ ರೂ ೨.೯೫ ಪೈಸೆಯ ದರವನ್ನು ಹಾಲು ಉತ್ಪಾದಕರಿಗೆ ನೀಡುತ್ತಿರುವುದು ನಿಜ. ಆದರೆ ಈಗ ಕೊಡುತ್ತಿರುವ ಬೆಲೆ ತೀರಾ ಕಡಿಮೆ ಎನ್ನುವುದು ಸರಿಯಲ್ಲ ಹಾಲು ಉತ್ಪಾದಕರಿಗೆ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದೂ ಕೂಡ ನಿಜ,

ದಿನಾಂಕ ೧೬-೬-೧೯೫೫ರಿಂದ ಹಾಲಿನ ಬೆಲೆಯಲ್ಲಿ ಕೆ.ಜಿ. ೧ಕ್ಕೆ ೫೦ ಪೈಸೆಯಷ್ಟು ಹೆಚ್ಚಳವನ್ನೂ ಹಾಗೂ ದಿನಾಂಕ ೧೫-೪-೧೯೮೭ರಿಂದ ಕೆ.ಜಿ. ೧ಕ್ಕೆ ೧೦ ಪೈಸೆಯಷ್ಟು ಹೆಚ್ಚು ಮಾಡಿ ಕರ್ನಾಟಕ ರಾಜ್ಯದ ಹಾಲು ಉತ್ಪಾದಕರಿಗೆ ನೀಡುತ್ತಿದ್ದು, ಈ ಬೆಲೆಯು ನೆರೆ ಹೊರೆಯ ರಾಜ್ಯಗಳಲ್ಲಿನ ಬೆಲೆಗಳಿಗೆ ಹೋಲಿಸಿದಾಗ ಉತ್ಕೃಷ್ಟವಾದುದೆಂದು ತಿಳಿದುಬರುತ್ತದೆ.

ರಾಜ್ಯದ ಹಾಲು ಉತ್ಪಾದಕರಿಗೆ ಶೇಕಡ ೪.೫ ಜಿಡ್ಡು ಹಾಗೂ ೮.೫ ಜಿಡ್ಡೇತರ ಪದಾರ್ಥವಿರುವ ಒಂದು ಲೀಟರ್ ಹಾಲಿಗೆ ಸರಿ. ೪೫ ಪೈಸೆಯಷ್ಟು ದರ ನೀಡಲಾಗುತ್ತಿದ್ದು ಮಾರಾಟದ ಬೆಲೆಯು ೧ ಲೀಟರ್ ಹಾಲಿಗೆ ರೂ. ೪.೫೦ ಪೈಸೆಯಷ್ಟು, ಶೇಖರಣೆ ಮತ್ತು ಮಾರಾಟದ ಬೆಲೆಯು ನಡುವಿನ ಅಂತರ ಕೇವಲ ರೂ. ೧.೦೭ ಪೈಸೆ ಮಾತ್ರವಿರುತ್ತದೆ. ಸಾಗಾಣಿಕೆ, ಸಂಸ್ಕರಣೆ ಹಾಗೂ ವಿತರಣೆಯ ವೆಚ್ಚದಲ್ಲಿ ಗಣನೀಯ ಹೆಚ್ಚಳ ಉಂಟಾಗಿದ್ದು ಹಾಲು ಉತ್ಪಾದಕರಿಗೆ ಇನ್ನೂ ಹೆಚ್ಚಿನ ಬೆಲೆಯನ್ನು ನೀಡುವುದು ಸಾಧ್ಯವಾಗುವುದಿಲ್ಲ.

೨) ಶಿಕಾರಿಪುರ ತಾಲ್ಲೂಕಿನ ಮುಂಚಿಕೊಪ್ಪ ಮಂಡಲ ಪಂಚಾಯಿತಿಯಲ್ಲಿ ಕೆಲಸ ಮಾಡಿರುವ ಕಾರ್ಯದರ್ಶಿಯವರಿಗೆ ಆಗಿರುವ ಅನ್ಯಾಯದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.— ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಮುಂಚಿಕೊಪ್ಪ ಮಂಡಲ ಪಂಚಾಯ್ತಿ ಕಾರ್ಯದರ್ಶಿಯಾಗಿ, ಮುಂಡರಗಿ ತಾಲ್ಲೂಕ್ ಸಿಂಕಬಾಲೂರ್‌ನ ಪಂಚಾಯ್ತಿ ಕಾರ್ಯದರ್ಶಿಯಾಗಿ ೧೮ ವರ್ಷ ಕೆಲಸ ಮಾಡಿದ ಹಾಲಿ ತಿಂಗಳಿಗೆ ೧೪೫ ರೂಪಾಯಿ ಸಂಬಳ ಪಡೆಯುವ ಒಬ್ಬ ಅಧಿಕಾರಿ ವರ್ಗಾವಣೆ ಆಗಿ ಬಂದಿದ್ದು ಅದೇ ರೀತಿ ಮುಂಡರಗಿ ತಾಲ್ಲೂಕ್ ಬಾಗೆವಾಡಿ ಪಂಚಾಯ್ತಿಯಲ್ಲಿ ೧೮ ವರ್ಷದಿಂದ ಕೆಲಸ ಮಾಡಿದ ಶ್ರೀ ಎಂ.ಎಫ್. ಹಟ್ಟಿ ಇವರನ್ನು ಸುಣ್ಣದ ಕೊಪ್ಪ (ಶಿಕಾರಿಪುರ ತಾಲ್ಲೂಕ್) ಮಂಡಲ ಪಂಚಾಯ್ತಿ ಕಾರ್ಯದರ್ಶಿಯಾಗಿ ನೇಮಿಸಿದ್ದು ಇವರಿಗೆ ತಿಂಗಳಿಗೆ ೧೫೫ ರೂಪಾಯಿ ಸಂಬಳ ಬರುತ್ತೆ, ಇವರಂಗಳು ಒಂದು ಸಾರಿ ಊರಿಗೆ ಹೋಗಿ ಬಂದರೆ ಒಂದು ತಿಂಗಳ ಸಂಬಳ ೧೪೫ ರೂಪಾಯಿ ಬಸ್‌ಚಾರ್ಗೆ ಖಾಲಿಯಾಗುತ್ತೆ. ಈ ರೀತಿ ಜೀತದಾಳುಗಳಂತೆ ಸಾವಿರಾರು ಜನ ೧೮-೨೦ ವರ್ಷದಿಂದ ಹಿಂದಿನ ಹಳೆ ಪಂಚಾಯ್ತಿಯಲ್ಲಿ ಕೆಲಸ ಮಾಡಿರುವ ನೌಕರರ ಸ್ಥಿತಿ ಚಿಂತಾಜನಕವಾಗಿದೆ. ಇದರಿಂದ ಮಂಡಲಪಂಚಾಯ್ತಿಗಳಲ್ಲಿ ಯಾವುದೇ ಕೆಲಸ ಆಗುತ್ತಿಲ್ಲ. ಬೇರೆ ನೌಕರರಿಗೆ ಕೊಡುವಂತೆ ಸಂಬಳ ಇವರಿಗೆ ಕೊಡುವ ಬಗ್ಗೆ ಸರ್ಕಾರ ಏನಾದರೂ ಯೋಚಿಸಿದೆಯೇ?